# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-36ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ಎಂದಿನಂತೆ ದಿನಾಂಕ: 17.09.2022 ರಂದು ಬೆಳಿಗ್ಗೆ 11.00 ಗಂಟೆಗೆ ಅಧ್ಯಕ್ಷರ ಆಗಮನದೊಂದಿಗೆ ವಾರ್ಡ್ ನಂ.36, ಛತ್ರಪತಿ ಶಿವಾಜಿ ವಾರ್ಡ್ ಸಮಿತಿ ಸಭೆಯನ್ನು ಗೊರಗುಂಟೆಪಾಳ್ಯ ಉಪವಿಭಾಗದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು ಈ ಕೆಳಕಂಡಂತಿರುತ್ತದೆ.**

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

1. ಶ್ರೀಮತಿ.ಶಶಿಕಲಾ, ಸಹಾಯಕ ಕಂದಾಯ ಅಧಿಕಾರಿಗಳು ಹಾಗೂ ಅಧ್ಯಕ್ಷಕರು
2. ಶ್ರೀ.ಮಂಜುನಾಥ್.ಕೆ. ಸಹಾಯಕ ಅಭಿಯಂತರರು, ವಾರ್ಡ್ ನಂ.42.
3. ಶ್ರೀ. ಮಣಿಮೆಘಾಲೈ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.36.
4. ಶ್ರೀ. ನಾರಾಯಣ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.36.
5. ಶ್ರೀ. ಸಿ.ರವಿ., ಆರ್.ಎಂ.ಸಿ.ಯಾರ್ಡ್ ಪೋಲೀಸ್
6. ಶ್ರೀ. ಮಂಜುನಾಥ, ಕಂದಾಯ ಪರಿವೀಕ್ಷಕರು ವಾರ್ಡ್ ನಂ.36.
7. ಶ್ರೀ. ದೇವರಾಜ್, ಮೇಲ್ವಿಚಾರಕರು, ವಾರ್ಡ್ ನಂ.42
8. ಶ್ರೀ.ಮುತ್ಯಾಲಪ್ಪ, ಮೇಲ್ವಿಚಾರಕರು, ವಾರ್ಡ್ ನಂ.36 ಎಸ್.ಡಬ್ಲ್ಯೂ.ಎಂ
9. ವಾರ್ಡ್ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲು ಸೂಚಿಸಿರುತ್ತಾರೆ.

ವಾರ್ಡ್-36ರ ವಾರ್ಡ್ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಕಾರ್ಯದರ್ಶಿ ಇಲ್ಲದ ಕಾರಣ ವಾರ್ಡ್ ನಂ.42ರ ಸಹಾಯಕ ಅಭಿಯಂತರರಾದ ಶ್ರೀ.ಮಂಜುನಾಥ್ ರವರು ವಾರ್ಡ್ ಸಮಿತಿ ಸಭೆಯಯನ್ನು ಪ್ರಾರಂಭಿಸಿದರು.

ಶ್ರೀಮತಿ.ಇಂದಿರಾ. ರವರು ಮಾತನಾಡಿ ಸ್ಲಂ ಪ್ರದೇಶಗಳಲ್ಲಿ ಕೊಳಚೆ ನೀರು ನಿಂತುಕೊಂಡು ಅದರ ಮೇಲೆ ಸೊಳ್ಳೆಗಳು ಉತ್ಪತ್ತಿಯಾಗುತ್ತಿದ್ದು, ಕೂಡಲೇ ಔಷಧಿ ಸಿಂಪಡಿಸಲು ಹಿರಿಯ ಆರೋಗ್ಯ ಪರಿವೀಕ್ಷಕ ರವರಿಗೆ ತಿಳಿಸಲಾಯಿತು.

ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-36

ಶ್ರೀ.ನಂಜುಂಡಪ್ಪ ರವರು ಮಾತನಾಡಿ ದಾಸನಾಯಕನ ಪಾಳ್ಯ ರಸ್ತೆಗಳಲ್ಲಿ ಸಾಕಷ್ಟು ಡೆಬ್ರಿಸ್ ಹಾಕಿದ್ದು, ಸಾರ್ವಜನಿಕರಿಗೆ ತುಂಬಾ ತೊಂದರೆಯುಂಟಾಗಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ಸೂಚಿಸಿದರು

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೊರಗುಂಟೆಪಾಳ್ಯ ಉಪವಿಭಾಗ

ಮಹಿಳಾ ಪಾರ್ಕ್ ರಸ್ತೆಯ ಮೋರಿಯ ತುಂಬಾ ಸಿಲ್ಟ್ ತುಂಬಿಕೊಂಡು ನೀರು ಹರಿಯದೆ ಭಾರಿ ಮಳೆ ಸಂಭವಿಸಿದಾಗ ಮೋರಿಯ ನೀರು ಮಳೆಯ ನೀರಿನೊಂದಿಗೆ ಮಿಶ್ರಣಗೊಂಡು ಕೈಗಾರಿಕೆಯ ದಾಸ್ತಾನು ಮಳಿಗೆಗೆ ನೀರು ನುಗ್ಗಿ ತುಂಬಾ ತೊಂದರೆಯಾಗುತ್ತಿರುವುದಾಗಿ ಸಂಬಂಧಪಟ್ಟ ಮಾಲೀಕರು ತಿಳಿಸಿರುತ್ತಾರೆ.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೊರಗುಂಟೆಪಾಳ್ಯ ಉಪವಿಭಾಗ

ಕೊನೆಯಲ್ಲಿ ಬಿಬಿಎಂಪಿ ಯ 2022ರ ಚುನಾವಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ /ಮತದಾರರಿಗೆ ತಮ್ಮ ಮತದಾರರ ಗುರುತಿನ ಚೀಟಿಗೆ ಆಧಾರ ಜೋಡಣೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದ್ದು, ವಾರ್ಡ್‌ನ ಶಾಲೆಗಳಲ್ಲಿ ಕ್ಯಾಂಪ್‌ಗಳನ್ನು ನಡೆಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಆಧಾರ್ ಜೋಡಣೆಯನ್ನು ಯಶಸ್ವಿಗೊಳಿಸಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರಿಗೆ ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ. ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Manjunath.K
22/09
(ಶ್ರೀ. ಮಂಜುನಾಥ ಕೆ.)
ಸಹಾಯಕ ಅಭಿಯಂತರರು
ಮತ್ತು ಕಾರ್ಯದರ್ಶಿ
ವಾರ್ಡ್–42.

(ಶ್ರೀಮತಿ ಶಶಿಕಲಾ)
ಸಹಾಯಕ ಕಂದಾಯ ಅಧಿಕಾರಿಗಳು
ಅಧ್ಯಕ್ಷರು [illegible] ಅಧಿಕಾರಿಗಳು